ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಅನುಬಂಧ–4)

ಅಧ್ಯಕ್ಷರು : ಈಗ ಮೂರನೆಯ ವಿಧೇಯಕವನ್ನು ತೆಗೆದುಕೊಳ್ಳೋಣ. ಇನ್ನು 10 ನಿಮಿಷಗಳಲ್ಲಿ ಪೂರೈಸಿಕೊಟ್ಟು ಬಿಡುತ್ತೇನೆ.

ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ : ಬೇಡ ಸರ್. ಟೈಮ್ ಆಗುತ್ತದೆ. ನಾಳೆ ಮಾಡಲಿ ಬಿಡಿ ಗಮನ ಸೆಳೆಯುವುದು ಅಲ್ಲ. ದಯವಿಟ್ಟು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಟಿ.ಬಿ. ಜಯಚಂದ್ರ : ನಾನು ಅಲ್ಲಿ ಕೌನ್ಸಿಲ್‌ಗೆ ಹೋಗಬೇಕು.

ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ : ಅಲ್ಲ, ನೀವು ಆಗಿನಿಂದ ಅದನ್ನೇ ಹೇಳುತ್ತಿದ್ದೀರಿ. ದಯವಿಟ್ಟು ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು: ಕೌನ್ಸಿಲ್‌ಗೆ ಹೋಗಬೇಕು ಅದಕ್ಕಾಗಿ ಹೇಳುತ್ತಿದ್ದಾರೆ. ಆಯಿತು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಇದು ಕೇವಲ Law Commission recommendation ಮೇಲೆ valuation ಅಷ್ಟೆ. ಇದು court fee rise ಮಾಡುವುದು.

3. ಕರ್ನಾಟಕ ನ್ಯಾಯಾಲಯ ಶುಲ್ಕಗಳ ಮತ್ತು ದಾವೆಗಳ ಮೌಲ್ಯ ನಿರ್ಣಯ (ತಿದ್ದುಪಡಿ) ವಿಧೇಯಕ, 2014

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ನ್ಯಾಯಾಲಯ ಶುಲ್ಕಗಳ ಮತ್ತು ದಾವೆಗಳ ಮೌಲ್ಯ ನಿರ್ಣಯ (ತಿದ್ದುಪಡಿ) ವಿಧೇಯಕ, 2014 ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ. ಅದರ ಜೊತೆಯಲ್ಲಿ ಇದನ್ನು ಯಾವ ಕಾರಣಕ್ಕೋಸ್ಕರ ತಂದಿದ್ದೇವೆ ಎಂದರೆ, ಕರ್ನಾಟಕದಲ್ಲಿ ಮುಖ್ಯ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ Law Commission ಇದ್ದು, ಅದಕ್ಕೆ ಒಬ್ಬ High Court Judge ಮತ್ತು ಮುಖ್ಯ ನ್ಯಾಯಾಧೀಶರು ಇರುತ್ತಾರೆ. ನಮ್ಮಲ್ಲಿರುವ ಕಾನೂನುಗಳನ್ನು ಆಯಾಯ ಸಂದರ್ಭಕ್ಕನುಸಾರವಾಗಿ ನ್ಯಾಯಾಲಯದ ಆದೇಶಗಳು ಏನು ಬರುತ್ತವೆ, ಅದಕ್ಕನುಗುಣವಾಗಿ ಸರ್ಕಾರಕ್ಕೆ ಸಲಹೆಗಳನ್ನು ಕೊಡುತ್ತಿರುತ್ತಾರೆ. Law Commission ನವರು ಒಂದು ವರದಿಯನ್ನು ಕೂಡ ಕೊಟ್ಟಿದ್ದಾರೆ. ಕೇಸ್‌ಗಳೇನಾದರೂ ನ್ಯಾಯಾಲಯದ ಮುಂದೆ ಹೋದಾಗ pre-settlement ಆದಾಗ, ರಾಜಿ ಆದಾಗ ಮೊದಲು

50% ಇದ್ದುದ್ದನ್ನು ಈಗ 75% refund ಮಾಡಬೇಕೆಂದು ತೀರ್ಮಾನವಾಗಿದ್ದು, ಅದಕ್ಕೋಸ್ಕರ ಒಂದು ತಿದ್ದುಪಡಿಯನ್ನು ತರುತ್ತಿರುವುದು.

ಶ್ರೀ ಕೆ.ಜಿ. ಬೋಪಯ್ಯ : ಈಗ suppose, compromise ಆದರೆ original suit ನಲ್ಲಿ ಏನು court fee ಕಟ್ಟಿರುತ್ತಾರೆ, ಅದನ್ನೂ ಸೇರಿಸಿ ಕೊಡಬೇಕೆಂದು ಇದೆ.

ಶ್ರೀ ಟಿ.ಬಿ. ಜಯಚಂದ್ರ : ಬೋಪಯ್ಯರವರು ಹೇಳುತ್ತಿದ್ದಾರೆ, ತಾವು ಸಲಹೆ ಮಾಡಿದ ನಂತರ Law Commission report ಅನ್ನು ನಾನು ಸಂಪೂರ್ಣವಾಗಿ ಓದಿದೆ. 'Any appeal is disposed of before the commencement of the hearing of such appeal three fourth of the amount of the fee paid in respect of the claim or claims in the suit or appeal shall ordered by the court to be refunded to the parties by whom the same have been paid respectively' ಈಗ lower court ನಲ್ಲಿ ಹಣವನ್ನು ಕಟ್ಟಿರುತ್ತಾರೆ, ಕೇಸ್ hear ಆಗಿರುತ್ತದೆ, ಆದರೆ appeal ನಲ್ಲಿ compromise ಆದಾಗ appeal ನಲ್ಲೇನು fee ಕಟ್ಟಿರುತ್ತಾರೋ ಅದು ಮಾತ್ರ refund ಆಗುತ್ತದೆ. ಇದು lower court ಗೆ ಬರುವುದಿಲ್ಲ, it doesno't apply.

ಅಧ್ಯಕ್ಷರು : ಗೈಡ್‌ಲೈನ್ ಪ್ರಕಾರ ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಸಾಕ್ಷಿ ಪುರಾವೆ ಆಗಿರುತ್ತವೆ.

ಶ್ರೀ ಟಿ.ಬಿ. ಜಯಚಂದ್ರ : ಲೋಕ್ ಅದಾಲತ್ ಅನ್ನು ಭಾರತ ಸರ್ಕಾರ ತಂದ ನಂತರ ಸುಪ್ರೀಂಕೋರ್ಟ್‌ನಲ್ಲಿ ನಡೆಯುವಂತಹ ಲೋಕ್ ಅದಾಲತ್‌ನಲ್ಲಿ ಕೇಸ್‌ಗಳು ರಾಜಿ ಆಗುತ್ತವೆ. Pre-litigation, litigation ಗಿಂತ ಮೊದಲೆ ರಾಜಿ ಆಗುತ್ತವೆ. ಪ್ರಕರಣಗಳು ಪ್ರಾರಂಭವಾಗುವುದಕ್ಕೆ ಮುಂಚೆ compromise ಆಗುತ್ತವೆ. ಇಲ್ಲಿವರೆಗೆ 50% ಕೊಡುತ್ತಿದ್ದು, ಈಗ 75% ಅವರಿಗೆ ಕೊಡಬೇಕೆಂಬುದು ನ್ಯಾಯಾಲಯದ ತೀರ್ಮಾನವಾಗಿದೆ. ತಾವು ಹೇಳಿದ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಮತ್ತೊಮ್ಮೆ ಚರ್ಚೆ ಮಾಡುತ್ತೇವೆ. ಅದರಲ್ಲಿ ಅವಕಾಶವಿದ್ದರೆ next ತರುವುದಕ್ಕೆ ನಾವು ತಯಾರು ಇದ್ದೇವೆ. ನಾವು ಈ ವಿಚಾರದಲ್ಲಿ flexible ಆಗಿದ್ದೇವೆ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಮಂತ್ರಿಗಳೆ, is this amount auditable under the purview of the audit or not ? Refund ಆಗಿರುವಂತಹ amount ಮತ್ತು settlement ಏನಿದೆ ಅದು ಅಡಿಟ್ ವ್ಯಾಪ್ತಿಗೆ ಬರುತ್ತದೆಯೇ ?

ಶ್ರೀ ಟಿ.ಬಿ. ಜಯಚಂದ್ರ : ಇದರಲ್ಲಿ ಅಡಿಟ್ ಪ್ರಶ್ನೆ ಬರುವುದಿಲ್ಲ. ಇದು between parties ಗೆ ಸಂಬಂಧಪಟ್ಟ ವಿಚಾರ, ಸಂಬಂಧವಿರುವುದಿಲ್ಲ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು, ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2014 ನೇ ಸಾಲಿನ ಕರ್ನಾಟಕ ನ್ಯಾಯಾಲಯ ಶುಲ್ಕಗಳ ಮತ್ತು ದಾವೆಗಳ ಮೌಲ್ಯ ನಿರ್ಣಯ (ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ.

ಅಧ್ಯಕ್ಷರು : ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ. 2 ನೇ ಖಂಡವು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

2ನೇ ಖಂಡವು ವಿಧೇಯಕದ ಅಂಗವಾಯಿತು.

ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು : ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ.

ಪ್ರಸ್ತಾವದ ಅಂಗೀಕಾರ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, 2014 ನೇ ಸಾಲಿನ ಕರ್ನಾಟಕ ನ್ಯಾಯಾಲಯ ಶುಲ್ಕಗಳ ಮತ್ತು ದಾವೆಗಳ ಮೌಲ್ಯ ನಿರ್ಣಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯೊಂದಿಗೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, 2014ನೇ ಸಾಲಿನ ಕರ್ನಾಟಕ ನ್ಯಾಯಾಲಯ ಶುಲ್ಕಗಳ ಮತ್ತು ದಾವೆಗಳ ಮೌಲ್ಯ ನಿರ್ಣಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯೊಂದಿಗೆ ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ವ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

ಅನುಬಂಧ–5

4. ಭಾರತ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ, 2014 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಟಿ.ಬಿ. ಜಯಚಂದ್ರ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಭಾರತ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ, 2014 ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ. ಇದು ಕೂಡ Law Commission recommendation ಆಧಾರದ ಮೇಲೆ ಸೀಮಿತವಾಗಿ succession ಎಂಬುದು few